## ಸೆಲೆಬ್ರಿಟಿ

■ ಹನಿ

## ಶ್ರೀ–ಅಶಾಂತ



ಶಾಂತಕುಮಾರನ್ ಶ್ರೀಶಾಂತ್‌ಗೆ ವಿವಾದಗಳು ಹೊಸತಲ್ಲ. ಆದರೆ ಈ ಸಲ ಸಿಕ್ಕಿಹಾಕಿಕೊಂಡಿರುವ ವಿವಾದ ಮಾತ್ರ ಈತನನ್ನು ಎಲ್ಲಿಗೆ ಒಯ್ಯುತ್ತದೆ ಎಂದು ಖಚಿತವಾಗಿ ಹೇಳುವಂತಿಲ್ಲ. 'ಒಂದು ಕಾಲು ಮನೆಯಲ್ಲಿ; ಇನ್ನೊಂದು ಕಾಲು ಜೈಲಿನಲ್ಲಿ' ಎನ್ನುವಂತಿದೆ ಆತನ ಪರಿಸ್ಥಿತಿ! ಭಾರತದ ಟೆಸ್ಟ್ ಕ್ರಿಕೆಟ್ ತಂಡದ ಈ ಬಲಗೈ ಮಧ್ಯಮವೇಗಿ ಬೌಲರ್, ಈಗ ಐಪಿಎಲ್ ಪಂದ್ಯದಲ್ಲಿ 'ಸ್ಪಾಟ್ ಫಿಕ್ಸಿಂಗ್' ಆರೋಪಿ. ಐಪಿಎಲ್‌ನಲ್ಲಿ ರಾಜಸ್ತಾನ ರಾಯಲ್ಸ್ ಪರವಾಗಿ ಆಡುತ್ತಿರುವ ಈತ, ಕಿಂಗ್ಸ್ ಇಲೆವೆನ್ ವಿರುದ್ಧದ ಪಂದ್ಯವೊಂದರಲ್ಲಿ ಓವರ್‌ಗೆ 14 ರನ್‌ಗಳಿಗಿಂತ ಹೆಚ್ಚಿಗೆ ಕೊಡುವ ಮೂಲಕ ಬೆಟ್ಟಿಂಗ್‌ನಲ್ಲಿ ಭಾಗವಹಿಸಿದ್ದಾನಂತೆ. ಪೊಲೀಸರ ಪ್ರಕಾರ, ಐಪಿಎಲ್‌ನ ಉಳಿದಿಬ್ಬರು ಆರೋಪಿ ಆಟಗಾರರು ಈ ಬಗ್ಗೆ ಮಾತನಾಡಿರುವ ದೂರವಾಣಿ ಸಂಭಾಷಣೆ ರೆಕಾರ್ಡ್ ಆಗಿದೆ. ಬಂಧಿತರಾದ 11 ಬುಕ್ಕಿಗಳೂ ಬಾಯಿ ಬಿಟ್ಟಿದ್ದಾರೆ. ಆದರೆ ಶ್ರೀಶಾಂತ್‌ನ ವಕೀಲರ ಪ್ರಕಾರ, 'ಆತನ ವಿರುದ್ಧ ನೇರ ಸಾಕ್ಷ್ಯಗಳು ಇಲ್ಲ!'

ಸಾಕ್ಷ್ಯಗಳ ಮಾತು ಸಾಬೀತಾಗಲು ಇನ್ನೂ ಸಮಯವಿದೆ. ಆದರೆ ಲಕ್ಷಾಂತರ ಕ್ರಿಕೆಟ್ ಅಭಿಮಾನಿಗಳ ಕಣ್ಣಲ್ಲಿ ಶ್ರೀಶಾಂತ್ ಎಂಬ ತರುಣ ಆಟಗಾರನ ಇಮೇಜ್ ಪಾತಾಳಕ್ಕೆ ಉರುಳಿಬಿದ್ದಾಗಿದೆ. 'ಓವರ್‌ನಲ್ಲಿ 14ಕ್ಕಿಂತ ಹೆಚ್ಚು ರನ್‌ಗಳನ್ನು ನೀಡಲು ಲಕ್ಷಾಂತರ ರೂಪಾಯಿ ಲಂಚ ಪಡೆದ' ಈ ಸ್ಪಾಟ್ ಫಿಕ್ಸಿಂಗ್ ಆರೋಪ ಈತನ ವೃತ್ತಿಜೀವನಕ್ಕೇ ಮುಳುವಾಗುವುದಂತೂ ಖಂಡಿತ.

ಕೇರಳದ ಕೋತಮಂಗಲದಲ್ಲಿ ಹುಟ್ಟಿದ ಶಾಂತಕುಮಾರನ್ ಶ್ರೀಶಾಂತ್ ಈ ಹಿಂದೆ ಕ್ರಿಕೆಟ್ ಮೈದಾನದಲ್ಲಿ ಸಹ ಆಟಗಾರರ ಜತೆ ಜಗಳ ಮಾಡಿಕೊಂಡದ್ದುಂಟು. ವಿಕೆಟ್ ಕಿತ್ತಾಗ ಉದ್ರೇಕದಿಂದ ವರ್ತಿಸಿದ್ದುಂಟು. ಈತನ ಇಂತಹ ಹುಚ್ಚಾಟದ ಹಿನ್ನೆಲೆಯಲ್ಲಿಯೇ ಐಸಿಸಿ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಹಲವು ಸಲ ಎಚ್ಚರಿಕೆ ನೀಡಲಾಗಿದೆ. 18 ತಿಂಗಳ ಕಾಲ ಟೆಸ್ಟ್ ತಂಡದಿಂದ ಹೊರಗಿದ್ದ ಈತ 2009ರಲ್ಲಿ ಮರಳಿ ಟೆಸ್ಟ್‌ಗೆ ಬಂದು ಶ್ರೀಲಂಕಾ ವಿರುದ್ಧ ಐದು ವಿಕೆಟ್‌ಗಳನ್ನು ಕಿತ್ತು 'ಪಂದ್ಯಶ್ರೇಷ್ಠ'ನಾಗಿ ಮೆರೆದದ್ದೂ ಉಂಟು. ಈತನ ಕೋಪ–ತಾಪಗಳನ್ನೇ ಕೇಂದ್ರವಾಗಿಟ್ಟುಕೊಂಡು 2009ರಲ್ಲಿ 'ಡ್ಯಾಡಿ ಕೂಲ್' ಎಂಬ ಮಲಯಾಳಂ ಸಿನಿಮಾ ಬಂದಿತ್ತು. ಅದರ ನಾಯಕ ಈತನನ್ನೇ ಹೋಲುತ್ತಿದ್ದು, ಆ ಚಿತ್ರ ಹಿಟ್ ಕೂಡಾ ಆಯಿತು! ಮೈದಾನದಲ್ಲಿ ಮತ್ತು ಹೊರಗೆ ಈತನ ಕೋಪತಾಪಗಳನ್ನು ಕಂಡ ಪ್ರೇಕ್ಷಕರು 'ಏನೋ ಹುಡುಗು ಮುಂಡೇದು. ಹರೆಯದ ಹುಮ್ಮಸ್ಸಿನಲ್ಲಿ (ಈತನಿಗಿನ್ನೂ 31 ವರ್ಷ) ಏನೇನೋ ಮಾಡ್ತಿದಾನೆ' ಎಂದುಕೊಂಡಿದ್ದರು. ಆದರೆ ಈಗ ಸ್ಪಾಟ್ ಫಿಕ್ಸಿಂಗ್‌ನಲ್ಲಿ ಕರಿವೆಣ್ಣುಗಳ, ಭೂಗತ ಪಾತಕಿಗಳ ಒಳಗೊಳ್ಳುವಿಕೆಯೂ ಇರುವ ಸುದ್ದಿ ಬಂದ ಬಳಿಕ ಶ್ರೀಶಾಂತ್ ಖಳನಾಯಕನಾಗಿದ್ದಾನೆ. ಕೇರಳ ಸರಕಾರ ತನ್ನ ಲಾಟರಿ ಜಾಹೀರಾತಿನಿಂದ ತಕ್ಷಣ ಈತನನ್ನು ಕಿತ್ತುಹಾಕಿದೆ. ಪೊಲೀಸರ ಬಂಧನದಲ್ಲಿ ಇನ್ನೆಷ್ಟು ಸತ್ಯಗಳನ್ನು ಈ ಅಶಾಂತ ಕ್ರಿಕೆಟಿಗ ಬಾಯಿ ಬಿಡುತ್ತಾನೋ ಗೊತ್ತಿಲ್ಲ! ●

---

## ದಿಟ್ಟೆ ಏಂಜೆಲಿನಾ



ಹಾಲಿವುಡ್‌ನ ನಟಿ ಏಂಜೆಲಿನಾ ಜೋಲಿ ಇದೀಗ ತನ್ನ ದಿಟ್ಟತನದ ಲೇಖನವೊಂದರಿಂದ ಸುದ್ದಿಯಲ್ಲಿದ್ದಾಳೆ. 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಪ್ರಕಟವಾದ ಈಕೆಯ ಲೇಖನದಲ್ಲಿ, ಸ್ತನ ಮತ್ತು ಅಂಡಾಶಯ ಕ್ಯಾನ್ಸರ್‌ನ ಅಪಾಯದಿಂದ ತಪ್ಪಿಸಿಕೊಳ್ಳಲು ತಾನು ಎರಡೂ ಸ್ತನಗಳ ಶಸ್ತ್ರಚಿಕಿತ್ಸೆ ಮಾಡಿಕೊಂಡಿರುವುದಾಗಿ ಏಂಜೆಲಿನಾ ಜೋಲಿ ಪ್ರಕಟಿಸಿದ್ದಾಳೆ. ಮಾತ್ರವಲ್ಲ, ಇಂತಹ ಸಂದರ್ಭಗಳು ಬಂದಾಗ ಹೆಣ್ಣುಮಕ್ಕಳು ಹೇಗೆ ಧೈರ್ಯದಿಂದ ಎದುರಿಸಬೇಕು ಎಂಬ ಸೂಚನೆಗಳನ್ನೂ ನೀಡಿದ್ದಾಳೆ. ಈಕೆಯ ಈ ಲೇಖನಕ್ಕೆ ವಿಶ್ವಾದ್ಯಂತ ಮೆಚ್ಚುಗೆ ವ್ಯಕ್ತವಾಗಿದೆ. ತನ್ನ ಫ್ಯಾಶನ್ ಪ್ರಜ್ಞೆ ಮತ್ತು ಸೆಕ್ಸ್ ಅಪೀಲ್‌ನಿಂದಾಗಿ ಪದೇ ಪದೇ ಸುದ್ದಿಯಾಗುವ ಜೋಲಿ, ಈ ಸಲ ಸದುದ್ದೇಶದಿಂದಲೇ ಸುದ್ದಿಯಾಗಿರುವುದು ವಿಶೇಷ.

1999ರಲ್ಲಿ 'ಗರ್ಲ್ ಇಂಟರಪ್ಟೆಡ್' ಎನ್ನುವ ಸಿನಿಮಾದ ಪೋಷಕ ಪಾತ್ರಕ್ಕಾಗಿ ಆಸ್ಕರ್ ಪ್ರಶಸ್ತಿ ಪಡೆದ ಸುಂದರಿಯೀಕೆ. ಖ್ಯಾತ ನಟ ಬ್ರಾಡ್‌ಪಿಟ್ ಜತೆಗಿನ ಸಂಸಾರದಲ್ಲಿ ಮೂರು ಮಕ್ಕಳನ್ನು ಪಡೆದು, ಇನ್ನೂ ಮೂರು ಮಕ್ಕಳನ್ನು ದತ್ತು ಪಡೆದುಕೊಂಡು ಸುಖ ಸಂಸಾರ ನಡೆಸುತ್ತಿರುವ ಜೋಲಿಗೆ ಈಗ 37 ವರ್ಷ. ಈಕೆಯ ತಾಯಿ ತನ್ನ 56ರ ಹರೆಯದಲ್ಲಿ ಕ್ಯಾನ್ಸರ್‌ಗೆ ಬಲಿಯಾಗಿದ್ದಳು. ಹಾಗಾಗಿ ಜೋಲಿ ಹೆಚ್ಚು ಜಾಗ್ರತಳಾಗಿದ್ದಳು. 'ಸ್ತನ ಕ್ಯಾನ್ಸರ್ ಉಂಟು ಮಾಡುವ ಜೀವಕೋಶ ಪತ್ತೆಯಾದಾಗ ನಾನು ಧೃತಿಗೆಡಲಿಲ್ಲ. ಶಸ್ತ್ರಚಿಕಿತ್ಸೆಯ ಬಳಿಕ ಕ್ಯಾನ್ಸರ್‌ನ ಸಂಭಾವ್ಯತೆ ಶೇಕಡಾ 87ರಿಂದ ಶೇಕಡಾ 5ಕ್ಕೆ ಇಳಿದಿದೆ' ಎಂದಿದ್ದಾಳೆ ಜೋಲಿ.

1000 ಎಕ್ರೆ ವಿಸ್ತೀರ್ಣದಲ್ಲಿರುವ 35 ಬೆಡ್ ರೂಂಗಳ ಐಶಾರಾಮಿ ಬಂಗಲೆಯಲ್ಲಿ ವಾಸವಾಗಿರುವ ಜೋಲಿಗೆ ಬದುಕಿನ ನಶ್ವರತೆಯ ಬಗ್ಗೆಯೂ ಅರಿವಿದೆ. ಹಾಗೆಂದೇ ಆಕೆ ದಾನ, ದತ್ತಿಗಳಿಗೆ ದೊಡ್ಡ ಮೊತ್ತವನ್ನು ವ್ಯಯಿಸುತ್ತಿದ್ದಾಳೆ. ವಿಶ್ವಸಂಸ್ಥೆಯ ಯುದ್ಧ ನಿರಾಶ್ರಿತರ ರಾಯಭಾರಿ ಆಗಿಯೂ ಕೆಲಸ ಮಾಡುತ್ತಿದ್ದಾಳೆ. ಈಕೆಯ ವ್ಯಕ್ತಿತ್ವದಿಂದ ಇತರ ನಟೀಮಣಿಯರೂ ಸ್ಫೂರ್ತಿ ಪಡೆಯಬೇಕಿದೆ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65